2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ರಾಮನಗರ, ಕನಕಪುರದಲ್ಲಿ.

**<u>ಎಸ್.ಸಿ.5027/2022</u>**

ದಿಃ06.02.2025
ಚಾಸಾ-8 ಪ್ರಾಸಾ-7

| | |
|---|---|
| ಹೆಸರು | : ಸಂಪಂಗಿರಾಮ |
| ತಂದೆಯ ಹೆಸರು | : ದೊಡ್ಡರಾಮೇಗೌಡ |
| ವಯಸ್ಸು | : 55 ವರ್ಷ |
| ಉದ್ಯೋಗ | : ವ್ಯವಸಾಯ |
| ವಾಸ | : ತೋಟಹಳ್ಳಿ |

**(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು)**
**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

ನನಗೆ ಚಾಸಾ-1 ರವರು ಗೊತ್ತು. ಸಾಕ್ಷಿಯು ದಿಃ10.05.2020ರ ಸ್ಥಳ ಪಂಚನಾಮೆ ಹಾಗೂ ಅದರಲ್ಲಿರುವ ತನ್ನ ಎಡಗೈ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸದರಿ ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸುಮಾರು 5 ವರ್ಷಗಳ ಹಿಂದೆ ಪೊಲೀಸರು ಚಾಸಾ-1ರವರ ಮನೆಯ ಬಳಿ ಬಂದು ಮಹಜರ್ ಕ್ರಮ ಜರುಗಿಸಿದ ಸಮಯದಲ್ಲಿ ನಿಪಿ-2ಕ್ಕೆ ಸಹಿ ಮಾಡಿರುತ್ತೇನೆ.

ದಿಃ09.05.2020ರಂದು ಚಾಸಾ-1 ಹಾಗೂ ಆರೋಪಿತರ ನಡುವೆ ನಡೆದ ಗಲಾಟೆಗೆ ಸಂಬಂಧಪಟ್ಟಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಪೊಲೀಸರು ಬೆಳಗ್ಗೆ 10-00 ರಿಂದ 11-00 ಗಂಟೆ ಸಮಯದಲ್ಲಿ ನನ್ನ ಹಾಗೂ ಚಾಸಾ-1 ಮತ್ತು 7ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಪೊಲೀಸರು ನಿಪಿ-2ನ್ನು ಜರುಗಿಸುವ ಕಾಲದಲ್ಲಿ ಒಂದು ಕಲ್ಲು, ಒಂದು ಕಬ್ಬಿಣದ ರಾಡು, ಒಂದು ಬೀಗ, ಒಂದು ಟಿಶರ್ಟ್, ಒಂದು ಅಂಡರ್ ವೇರ್, ಒಂದು ಚಾಕುವನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಟಿಶರ್ಟ್ ಹಾಗೂ ಒಂದು ಬೀಗವನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂಒ-1 ಮತ್ತು 3 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನಿಪಿ-2ನ್ನು ಜರುಗಿಸುವ ಕಾಲಕ್ಕೆ ಪೊಲೀಸರು ಒಡೆದ ಗಾಜಿನ ಚೂರುಗಳು, ಒಂದು ಬನಿಯನ್ ಹಾಗೂ ಇನ್ನೋವಾ ಕಾರನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಎಂ.ಎಂ., ಆರೋಪಿತರ ಪರ ವಕೀಲರಿಂದ**

ಸಾತನೂರು ಪೊಲೀಸರು ಪಂಚನಾಮೆಗೆ ಬರಲು ನನಗೆ ಫೋನ್ ಮೂಲಕ ತಿಳಿಸಿರುತ್ತಾರೆ. ಚಾಸಾ-1ರವರ ಮನೆಯ ಬಳಿ ಹೋದಾಗ 4-5 ಜನ ಪೊಲೀಸರು ಹಾಗೂ ಚಾಸಾ-1ರವರು ಇದ್ದರು. ಚಾಸಾ-1ರವರ ಮನೆಯ ಬಳಿ ಅಲ್ಲಲ್ಲಿ ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ಪೊಲೀಸರು ಮಹಜರ್ ಜರುಗಿಸುವ ಕಾಲದಲ್ಲಿ ನಾನು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2ರಂತೆ ಮಹಜರ್ ಜರುಗಿಸುವ ಕಾಲಕ್ಕೆ ಪೊಲೀಸರು 4-5 ಒಡೆದ ಗಾಜಿನ ಚೂರುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಪೊಲೀಸರು ವಶಪಡಿಸಿಕೊಂಡ ಬನಿಯನ್‌ನ ಯಾವ ಯಾವ ಕಡೆಗಳಲ್ಲಿ ರಕ್ತದ ಕಲೆಯಾಗಿತ್ತು ಎಂದು ನಾನು ನೋಡಿರುವುದಿಲ್ಲ. ನಾನು ಸ್ಥಳಕ್ಕೆ ಹೋದಾಗ ಚಾಸಾ-1ರವರ ಮನೆಯ ಕಾಂಪೌಂಡ್ ಬಳಿ 5-6 ಕಡೆಗಳಲ್ಲಿ ರಕ್ತದ ಕಲೆಯಾಗಿರುವುದನ್ನು ನೋಡಿ ಗಮನಿಸಿರುತ್ತೇನೆ. ಈ ವಿಚಾರವನ್ನು ಮಹಜರಿನಲ್ಲಿ ಹೇಳಿ ಬರೆಯಿಸಿರುವುದಿಲ್ಲ ಎಂದರೆ ಸರಿ. ಚಾಸಾ-1ರವರ ಮನೆಯ ಉತ್ತರ ದಿಕ್ಕಿನ ಕಡೆಗೆ ದನದ ಕೊಟ್ಟಿಗೆ ಇರುತ್ತದೆ. ಚಾಸಾ-1ರವರ ಮನೆಗೆ ಒಂದು ದೊಡ್ಡ ಗೇಟು ಮತ್ತು ಒಂದು ಸಣ್ಣ ಗೇಟು ಇರುತ್ತದೆ. ಚಾಸಾ-1ರವರು ನಮ್ಮ ಗ್ರಾಮದವರು ಎಂದರೆ ಸರಿ. ಚಾಸಾ-7ರವರು ತೋಟಹಳ್ಳಿ ಗ್ರಾಮದ ವಾಸಿ ಎಂದರೆ ಸರಿ. ನಾನು ಚಾಸಾ-1ರವರ ಮನೆಯ ಬಳಿ ಹೋಗುವ ಮೊದಲೇ ಚಾಸಾ-7ರವರು ಇದ್ದರು. ನಿಪಿ-2ಕ್ಕೆ ಹಾಕಿದ ನನ್ನ ಎಡಗೈ ಹೆಬ್ಬೆಟ್ಟಿನ ಗುರುತಿಗೆ ಪೊಲೀಸರು ಷರಾ ಬರೆದಿರುತ್ತಾರೆ. ಪೊಲೀಸರು ನನ್ನ ಸಮಕ್ಷಮ ಮಹಜರ್ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ - ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ. ಎಂದು ಸಾಕ್ಷಿ ಒಪ್ಪಿರುತ್ತಾರೆ.

**(ಕುಮಾರ್.ಹೆಚ್.ಎನ್)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ, ಕನಕಪುರದಲ್ಲಿ.